ನಿಯಮತಯ ವೆಚ್ಚದ ಮಿತಿಯಲ್ಲಿ ಎಲ್ಲಕಂಪನಿಗಳಿಗೂ ಹಂಚಿಕೆಯಾಗಿ ಆ ಮಿತಿಯೊಳಗೆ ಅವರ ಖರ್ಚು ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಇವರ ಎಲ್ಲ ಖರ್ಚು ವೆಚ್ಚಗಳ ಕರ್ನಾಟಕ ವಿದ್ಯುತ್ ಸುಧಾರಣೆ ಆಯೋಗದ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.

ಕಳೆದ ವರ್ಷದ ಆಯವ್ಯಯ ಮಂಡನೆಯ ನಂತರ ವಾಣಿಜ್ಯ ತೆರಿಗೆ ಇಲಾಖೆ ನೀಡಿದ ರಿಯಾಯಿತಿ

1047 (1072) - ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಆಯವ್ಯಯ ಮಂಡನೆಯಾಗಿ ಸದನ ಅನುಮೋದಿಸಿದ ನಂತರ ಎಷ್ಟು ರಿಯಾಯಿತಿಯನ್ನು ವಾಣಿಜ್ಯ ತೆರಿಗೆ ಇಲಾಖೆಯವರು ನೀಡಿದ್ದಾರೆ: ಅದರ ಮೊತ್ತ ಎಷ್ಟು?

ಆ) ಯಾವ ಯಾವ ಬಾಬ್ತಿಗೆ ರಿಯಾಯಿತಿಗಳನ್ನು ನೀಡಲಾಗಿದೆ: ರಿಯಾಯಿತಿ ನೀಡಿಕೆಯಿಂದಾಗಿ ಸರಕಾರಕ್ಕೆ ಎಷ್ಟು ಮೊತ್ತದ ಆದಾಯ ಕಡಿತ ಉಂಟಾಗಿದೆ:

ಇ) ಆದಾಯ ಕೊರತೆಯನ್ನು ಸರಿದೂಗಿಸಲು ಸರಕಾರದವರು ಕೈಗೊಂಡ ಕ್ರಮಗಳು ಏನು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ಅನ್ವಯ 2000-01 ರ ಆಯವ್ಯಯ ಮುಗಿದ ನಂತರ 42 ಪ್ರಕರಣಗಳಲ್ಲಿ 7 ನೂತನ ಕೈಗಾರಿಕಾ ಪ್ರಕರಣಗಳು ಸೇರಿ ತೆರಿಗೆ ವಿನಾಯಿತಿ / ರಿಯಾಯಿತಿ ನೀಡಿರುತ್ತದೆ. ಹಾಗೆಯೇ ಪ್ರವೇಶ ತೆರಿಗೆ ಕಾಯ್ದೆ ಅನ್ವಯ 12 ಪ್ರಕರಣಗಳಲ್ಲಿ 10 ನೂತನ ಕೈಗಾರಿಕಾ ಪ್ರಕರಣಗಳು ಸೇರಿ. ವಿಲಾಸ ತೆರಿಗೆ ಕಾಯ್ದೆ ಅನ್ವಯ 1 ಪ್ರಕರಣದಲ್ಲಿ ತೆರಿಗೆ ವಿನಾಯಿತಿ ರಿಯಾಯಿತಿ ನೀಡಿರುತ್ತದೆ. ಈ ಪ್ರಕರಣಗಳಿಂದ ಒಟ್ಟು ರೂ. 2833.54 ಕೋಟಿಯಷ್ಟು ತೆರಿಗೆ ವಿನಾಯಿತಿ / ರಿಯಾಯಿತಿ ಒಳಗೊಂಡಿದ್ದು ಈ ಮೊತ್ತದಲ್ಲಿ ನೂತನ ಕೈಗಾರಿಕೆ ಘಟಕಗಳಿಗೆ ಅವರು ತಯಾರಿಕೆ ಆರಂಭಿಸಿದ ದಿನದಿಂದ 3/5/8/10/18 ವರ್ಷಗಳ ಅವಧಿಯವರೆಗೆ ಲಭ್ಯವಿರುವ ಗರಿಷ್ಟ ತೆರಿಗೆ ವಿನಾಯಿತಿ ಕೂಡ ಸೇರಿರುತ್ತದೆ.

ಆ) ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ, ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ, ಕರ್ನಾಟಕ ವಿಲಾಸ ತೆರಿಗೆ ಕಾಯ್ದೆಗಳ ಅಡಿಯಲ್ಲಿ ವಿನಾಯಿತಿ / ರಿಯಾಯಿತಿಯನ್ನು ನೀಡಿರುವ ವಿವರ ಈ ಕೆಳಕಂಡಂತೆ ಇರುತ್ತದೆ:

ಕ.ಮಾ.ತೆ.	42 ಪ್ರಕರಣಗಳು	ರೂ. 2814.17 ಕೋಟಿಗಳು
ಕ.ಪ್ರ.ತೆ.	12 ಪ್ರಕರಣಗಳು	----------
ಕ.ವಿ.ತೆ.	1 ಪ್ರಕರಣ	ರೂ. 0.19 ಕೋಟಿಗಲು

ಇ) ಕೈಗಾರಿಕಾ ನೀತಿಯಡಿಯಲ್ಲಿ ಕೊಡಲ್ಪಟ್ಟ ರಿಯಾಯಿತಿಯಿಂದ ಆದ ಬಂಡವಾಳ ಹೂಡಿಕೆಯಿಂದ ಪ್ರೇರಿತಗೊಂಡು (ಸ್ಪಿನ್ - ಆಫ್) ಹೊಸ ಬಂಡವಾಳ ಹೂಡಿಕೆಗೆ ಚಾಲನೆ ಬರುವುದೆಂದು ಹಾಗೂ ಅದರಿಂದ ಉದ್ಯೋಗವಕಾಶ ಮತ್ತು ಅನುಭೋಗ (ಬಳಕೆ ಪ್ರಮಾಣ ಹೆಚ್ಚಾಗುವುದೆಂದು ನಿರೀಕ್ಷಿಸಲಾಗಿದೆ. ಇದಲ್ಲದೆ, ತೆರಿಗೆ ಪಾವತಿ ಸುಧಾರಣೆಯಾಗುವ ಮತ್ತು ಅಂತರಾಜ್ಯ ವ್ಯಾಪಾರ ಪಲ್ಲಟವಾಗುವ ನಿರೀಕ್ಷೆಯಿಂದ ವಲಯಗಳಿಗೆ ತೆರಿಗೆ ರಿಯಾಯಿತಿ ನೀಡಲಾಗಿದೆ.

ಹಾಗೂ ವಿನಾಯಿತಿ / ರಿಯಾಯಿತಿ ನಿಗದಿತ ಅವಧಿ ಮುಗಿದ ನಂತರ ರಾಜಸ್ವಕ್ಕೆ ಆದಾಯವು ಲಭ್ಯವಾಗುತ್ತದೆ. ವಿನಾಯಿತಿ / ರಿಯಾಯಿತಿ ನೀಡಿಕೆಯಿಂದ ಆದ ಆದಾಯ ಕೊರತೆಯನ್ನು ಸರಿದೂಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ:

1) ಬಾಕಿ ಇರುವ ಕರ ನಿರ್ಧರಣೆಗಳನ್ನು ವಿಲೇವಾರಿ ಮಾಡುವುದರಿಂದ ತತ್ಸಂಬಂಧ ಹೆಚ್ಚುವರಿ ತೆರಿಗೆ ಸಂಗ್ರಹಣೆಯಿಂದ.

2) ಬಚ್ಚಿಟ್ಟ ಹಾಗೂ ತೆರಿಗೆ ವಂಚಿಸಿದ ಪ್ರಕರಣಗಳನ್ನು ಬೆಳಕಿಗೆ ತಂದು ವಂಚಿತ ತೆರಿಗೆ ವಸೂಲಿ ಕ್ರಮದಿಂದ.

ಅಬಕಾರಿ ಗುತ್ತಿಗೆದಾರರು ಮಾಡಿದ ಕಿಸ್ತು ಹಣ ಪಾವತಿ ಕುರಿತು

1048 (1161) - ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2001ರ ಡಿಸೆಂಬರ್ ತನಕ ಕಿಸ್ತು ಹಣವನ್ನು ಪಾವತಿ ಮಾಡಿದ ಹಾಗೂ ಪಾವತಿ ಮಾಡದ ಅಬಕಾರಿ ಗುತ್ತಿಗೆದಾರರ ವಿವರ ನೀಡುವುದು.

ಆ) ಹೀಗೆ ಕಿಸ್ತು ಹಣವನ್ನು ಪಾವತಿಸದಿದ್ದವರ ಮೇಲೆ ಸರ್ಕಾರದವರು ಜರುಗಿಸಿದ ಕ್ರಮಗಳೇನು?

ಇ) ಅಬಕಾರಿ ಗುತ್ತಿಗೆದಾರರು ನಿಯಮಗಳ ಪ್ರಕಾರ ಬ್ಯಾಂಕ್ ಗ್ಯಾರಂಟಿ ಕೊಡಬೇಕಾಗಿದ್ದು ಎಷ್ಟು ಗುತ್ತಿಗೆದಾರರು ಬ್ಯಾಂಕ್ ಗ್ಯಾರಂಟಿ ಕೊಡದೆ ನಿಯಮಗಳ ಉಲ್ಲಂಘನೆ ಮಾಡಿದ್ದಾರೆ. ಬ್ಯಾಂಕ್ ಗ್ಯಾರಂಟಿ ಕೊಡದಿದ್ದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಎಂ ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ವಿವರಗಳನ್ನು ಕ್ರಮವಾಗಿ ಅನುಬಂಧ - 1 ಮತ್ತು 2 ರಲ್ಲಿ ನೀಡಿದೆ.

ಆ) ಸ್ಥಿರೀಕರಣ ಆದೇಶಗಳನ್ನು ರದ್ದುಪಡಿಸಿ ಈ ತಾಲ್ಲೂಕುಗಳ ಸಾರಾಯಿ ಅಂಗಡಿಗಳನ್ನು ಮರು ವಿಲೇವಾರಿ ಮಾಡಲಾಗಿದೆ.ಮತ್ತು ಗುತ್ತಿಗೆದಾರರು ನೀಡಿದ್ದ ಮುಂಗಡ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅಲ್ಲದೆ ಇವರಿಂದ ಬರಬೇಕಾದ ಬಾಕಿಯನ್ನು ಭೂ ಕಂದಾಯ ಕಾಯಿದೆಯಡಿ ವಸೂಲಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ.

ಇ) 97 ತಾಲ್ಲೂಕುಗಳ ಅಬಕಾರಿ ಗುತ್ತಿಗೆದಾರರು ಪೂರ್ಣ ಬ್ಯಾಂಕ್ ಗ್ಯಾರಂಟಿಯನ್ನು ನೀಡಿರುವುದಿಲ್ಲ.

1. 31 ತಾಲ್ಲೂಕುಗಳಲ್ಲಿ ಸ್ಥಿರೀಕರಣ ಆದೇಶಗಳನ್ನು ರದ್ದುಪಡಿಸಿ ಮುಂಗಡ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ತಾಲ್ಲೂಕುಗಳನ್ನು ಮರು ವಿಲೇವಾರಿ ಮಾಡಲಾಗಿರುತ್ತದೆ.
2. 9 ತಾಲ್ಲೂಕುಗಳ ಸ್ಥಿರೀಕರಣ ಆದೇಶಗಳನ್ನು ರದ್ದುಪಡಿಸಲು ಕೈಗೊಂಡ ಕ್ರಮದ ಬಗ್ಗೆ ಗುತ್ತಿಗೆದಾರರು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆ ಪಡೆದಿರುತ್ತಾರೆ.
3. ಉಳಿದ ತಾಲ್ಲೂಕುಗಳ ಗುತ್ತಿಗೆದಾರರು ಬಾಡಿಗೆ ಹಣವನ್ನು ಸರಿಯಾಗಿ ಸಂದಾಯ ಮಾಡಿದ್ದು ಪ್ರಸಕ್ತ ಸಾಲಿನಲ್ಲಿ ಮರು ಹರಾಜಿಗೆ ಹೆಚ್ಚಿನ ಕಾಲಾವಕಾಶವಿಲ್ಲದಿದ್ದ ಪ್ರಯುಕ್ತ ಸರ್ಕಾರದ ರಾಜಸ್ವದ ಹಿತದೃಷ್ಟಿಯಿಂದ ಮರು ವಿಲೇ ಮಾಡದೆ ಇವರಿಂದ ಪೂರ್ತಿ